10.3.25

39-O-155

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಹಣಮಂತ ರುದ್ರಪ್ಪ ನಿರಾಣಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ

ವಿಷಯ:

ರೈತರ ವಿರೋಧದ ನಡುವೆಯೂ ವಿಜಯಪುರ ಜಿಲ್ಲೆಯ ನಿಡಗುಂದಿ ತಾಲ್ಲೂಕಿನ ಆಲಮಟ್ಟಿಯ ಲಾಲ್ ಬಹದ್ದೂರ್ ಶಾಸ್ತ್ರಿ ಜಲಾಶಯದಿಂದ ತೆಲಂಗಾಣ ರಾಜ್ಯಕ್ಕೆ 1.27 ಟಿಎಂಸಿ ನೀರನ್ನು ಬಿಡುಗಡ ಮಾಡಿರುವುದರ ಕುರಿತು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಇದೇ ರೀತಿ ಸನ್ 2017-18 ನೇ ಸಾಲಿನಲ್ಲಿಯೂ ಸಹ ಬೇರೆ ಬೇರೆ ಯೋಜನೆಗೆ ನೀರು ಬಿಡುಗಡೆ ಮಾಡಿದಾಗ ಆ ಭಾಗದ ರೈತರು ಆಕ್ಷೇಪಣೆ ಮಾಡಿದರೂ ಸಹ ಆಗಿನ ನೀರಾವರಿ ಸಚಿವರು ರೈತರ ಮನವಿಯನ್ನು ಪರಿಗಣನೆಗೆ ತೆಗೆದುಕೊಳ್ಳದೇ ನೀರನ್ನು ಕೆಳಭಾಗದ ನದಿಗೆ ಹಾಗೂ ಕಾರ್ಖಾನೆಗಳಿಗೆ ಹರಿಬಿಟ್ಟಿರುವುದರಿಂದ ಆ ವರ್ಷ ಬಹಳಷ್ಟು ರೈತರಿಗೆ /ಜನ ಸಾಮಾನ್ಯರಿಗೆ ಅಷ್ಟೇ ಅಲ್ಲದೇ ವಿಜಯಪುರ ನಗರಕ್ಕೆ ಕುಡಿಯಲು ನೀರಿಲ್ಲದೇ ಪರದಾಡುವ ಪರಿಸ್ಥಿತಿಯನ್ನು ಎದುರಿಸಿದ್ದನ್ನು ನಾವು ಪುನಃ ಗಮನಿಸಬೇಕಾದ ಪ್ರಮುಖ ಅಂಶವಾಗಿದೆ ಹಾಗೂ ನದಿಯಲ್ಲಿರುವ ಜಲಚರಗಳು ಸಹ ನೀರಿಲ್ಲದೇ ಸಾವನ್ನಪ್ಪಿರುವುದು ಮರೆಯುವಂತಿಲ್ಲ. ಮತ್ತು ಮಾರ್ಚ್ ಅಂತ್ಯದಲ್ಲಿಯೇ ಕುಡಿಯುವ ನೀರಿಗೆ ತತ್ವಾರ ಎದುರಾಗಿ ಪರದಾಡುವಂತಾಗಿದೆ. ಹಾಗಾಗಿ ಮತ್ತೆ ಈ ವರ್ಷದಲ್ಲಿ ತೆಲಂಗಾಣಕ್ಕೆ ನೀರು ಬಿಟ್ಟರೇ ಆ ಭಾಗದ ರೈತರಿಗೆ ತುಂಬಲಾರದ ನಷ್ಟವನ್ನು ಎದುರಿಸಬೇಕಾಗುತ್ತದೆ ಎಂಬ ಅಂಶವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸರ್ಕಾರವು ನಮ್ಮ ರೈತರ/ಧನಕರುಗಳ/ಜನ ಸಾಮಾನ್ಯರ ಹಿತದೃಷ್ಟಿಯಿಂದ ತಕ್ಷಣವೇ ಬೇರೆ ರಾಜ್ಯಕ್ಕೆ ಬಿಡುಗಡೆ ಮಾಡುತ್ತಿರುವ ನೀರನ್ನು ನಿಲ್ಲಿಸಬೇಕು ಮತ್ತು ಇನ್ನು ಮುಂದೆ ಮತ್ತೆ ನೀರನ್ನು ಬಿಡುಗಡೆ ಮಾಡುವ ಪ್ರಯತ್ನವಾಗಲಿ, ನೀರು ಬಿಡುಗಡೆ ಮಾಡಬಾರದು ಎಂಬುದರ ಕುರಿತು.

****

ಉತ್ತರಗಳು:

ಆಲಮಟ್ಟಿ ಹಾಗೂ ನಾರಾಯಣಪುರ ಜಲಾಶಯಗಳಲ್ಲಿ ದಿನಾಂಕ:10.03.2025ಕ್ಕೆ ಬಳಕೆಗೆ ಲಭ್ಯವಿರುವ ನೀರಿನ ಪ್ರಮಾಣದ ವಿವರ ಈ ಕೆಳಗಿನಂತಿರುತ್ತದೆ.

## Table-A

(ಟಿ.ಎಂ.ಸಿ)

| ಕ್ರಸಂ | ವಿವರಗಳು | ಆಲಮಟ್ಟಿ | ನಾರಾಯಣಪುರ | ಒಟ್ಟು |
|---|---|---|---|---|
| 1 | ಜಲಾಶಯದ ಪೂರ್ಣಮಟ್ಟ (FRL) (ಮೀ.ಗಳಲ್ಲಿ) | 519.600 | 492.252 | |
| 2 | ಒಟ್ಟು ಸಂಗ್ರಹಣೆ FRL ಮಟ್ಟಕ್ಕೆ | 123.081 | 33.310 | 156.391 |
| 3 | MDDL ಮಟ್ಟ (ಮೀ.ಗಳಲ್ಲಿ) | 506.870 | 487.100 | -- |
| 4 | Dead Storage ಪ್ರಮಾಣ (ಟಿ.ಎಂ.ಸಿ) | 17.620 | 14.757 | 32.377 |
| 5 | MDDL ಮಟ್ಟದ ಮೇಲ್ಪಟ್ಟು ನೀರಿನ ಪ್ರಮಾಣ | 105.461 | 23.533 | 129.014 |
| | ದಿನಾಂಕ:10.03.2025 ರ ನೀರಿನ ಮಟ್ಟ & ಸಂಗ್ರಹಣೆ ವಿವರಗಳು | | | |
| 6 | ನೀರಿನ ಮಟ್ಟ | 512.38 | 490.39 | |
| 7 | ಒಟ್ಟು ನೀರಿನ ಸಂಗ್ರಹಣೆ | 43.323 | 25.467 | 68.790 |
| 8 | Dead Storage ಸಂಗ್ರಹಣೆ | 17.620 | 14.760 | 32.380 |
| 9 | MDDL ಮೇಲ್ಪಟ್ಟ ಸಂಗ್ರಹಣೆ | 25.703 | 10.707 | 36.410 |
| 10 | ಒಳಹರಿವು (ಕ್ಯೂಸೆಕ್ಸ್) | --- | 277 | |
| 11 | ಹೊರಹರಿವು (ಕ್ಯೂಸೆಕ್ಸ್) | 1868 | 277 | |

ನೀರಾವರಿ ಸಲಹಾ ಸಮಿತಿ ತೀರ್ಮಾನ

(1) ನೀರಾವರಿಗಾಗಿ

ದಿನಾಂಕ 16.11.2024 ರಂದು ಜರುಗಿದ 2024-25ನೇ ಸಾಲಿನ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ದಿನಾಂಕ 09.12.2024 ರಿಂದ 23.03.2025 ರವರೆಗಿನ ಹಿಂಗಾರು ಬೆಳೆಗಳಿಗೆ ಮುಖ್ಯ ಕಾಲುವೆಗಳಡಿ 14 ದಿನಗಳ ಚಾಲೂ ಹಾಗೂ 10 ದಿನಗಳ ಬಂದ್ ಪದ್ಧತಿಯನ್ನು ಅನುಸರಿಸಿ ನೀರಾವರಿಗೆ ಲಭ್ಯವಿರುವ 65 ಟಿ.ಎಂ.ಸಿ ನೀರನ್ನು ಹರಿಸಲು ಸೂಚಿಸಲಾಗಿರುತ್ತದೆ.

(2) ಕುಡಿಯುವ ನೀರು ಹಾಗೂ ಇತರೆ ಬಳಕೆಗಾಗಿ:

ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯದ ಅನುಸಾರ ಹಿಂಗಾರು ಹಾಗೂ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಹಾಗೂ ಇತರೆ ಬಳಕೆಗಾಗಿ ಜೂನ್2025ರ ವರೆಗೆ ಆಲಮಟ್ಟಿ ಜಲಾಶಯದಿಂದ 29.04 ಟಿ.ಎಂ.ಸಿ ಹಾಗೂ ನಾರಾಯಣಪುರ ಜಲಾಶಯದಿಂದ 14.50 ಟಿ.ಎಂ.ಸಿ ನೀರನ್ನು, ಹೀಗೆ ಒಟ್ಟಾರೆ 43.54 ಟಿ.ಎಂ.ಸಿ ನೀರನ್ನು ಕಾಯ್ದಿರಿಸಲಾಗಿರುತ್ತದೆ.

ಕಳೆದ ಸಾಲಿನಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಹಾಗೂ ಇತರೆ ಬಳಕೆಗಾಗಿ ಮಾತ್ರ ಜೂನ್2024ರ ವರೆಗೆ ಒಟ್ಟು 39.250 ಟಿ.ಎಂ.ಸಿ ನೀರನ್ನು ಕಾಯ್ದಿರಿಸಲಾಗಿದ್ದು, ಉದ್ದೇಶಿತ ಬಳಕೆಗೆ ಅಭಾವ ಬರದಂತೆ ಸಮರ್ಪಕವಾಗಿ ನಿರ್ವಹಣೆಯನ್ನು ಮಾಡಲಾಗಿರುತ್ತದೆ.

ಪ್ರಸಕ್ತ ಸಾಲಿನಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಹಾಗೂ ಇತರೆ ಬಳಕೆಗಾಗಿ ಡಿಸೆಂಬರ್ 2024 ರಿಂದ ಜೂನ್ 2025ರ ವರೆಗೆ ಒಟ್ಟಾರೆ 43.54 ಟಿ.ಎಂ.ಸಿ ನೀರನ್ನು ಕಾಯ್ದಿರಿಸಲಾಗಿದ್ದು, ಇದುವರೆಗೆ 13.089 ಟಿ.ಎಂ.ಸಿ ನೀರನ್ನು ಬಳಸಲಾಗಿದ್ದು, ಬಾಕಿ 30.451 ಟಿ.ಎಂ.ಸಿ ಕಾಯ್ದಿರಿಸಿದ ನೀರಿನಲ್ಲಿ ಉದ್ದೇಶಿತ ಬಳಕೆಗೆ ಅಭಾವ ಬರದಂತೆ ಸಮರ್ಪಕವಾಗಿ ನಿರ್ವಹಣೆಯನ್ನು ಮಾಡಲಾಗುವುದು.

ಅಂತರ ರಾಜ್ಯಗಳೊಂದಿಗೆ ಉತ್ತಮ ಸಂಬಂಧವನ್ನು ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಹಾಗೂ ಮಾನವೀಯ ದೃಷ್ಟಿಯಿಂದ ತೆಲಂಗಾಣಕ್ಕೆ 1.29 ಟಿ.ಎಂ.ಸಿ ನೀರನ್ನು ಕುಡಿಯುವ ನೀರಿನ ಅವಶ್ಯಕತೆಗಾಗಿ ಬಿಡುಗಡೆಗೊಳಿಸಲಾಗಿದೆ.

(ಜಸಂಇ 23 ಡಬ್ಲ್ಯೂಬಿ.ಎಂ 2025)

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು